# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಕೆ.ಆರ್.ನಗರ

ಸಿಸಿ.ನಂ. 2/2025

| | | |
|---|---|---|
| ಸಾಕ್ಷಿಯ ಹೆಸರು | ನಾಗೇಶ | |
| ತಂದೆಯ ಹೆಸರು | ಕೇಶವ ಮೂರ್ತಿ | |
| ವಯಸ್ಸು | 69 ವರ್ಷ | |
| ಉದ್ಯೋಗ | ನಿವೃತ್ತ ಕಂದಾಯ ಅಧಿಕಾರಿ | ಡಿ.ಡಬ್ಲ್ಯೂ 1 |
| ವಾಸ ಸ್ಥಳ | ಕೆ.ಆರ್.ನಗರ | |

ದಿನಾಂಕಃ **31-05-2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದಃ**

1) ಸುಮಾರು 4 ವರ್ಷಗಳ ಹಿಂದೆ ನಾನು ದೂರುದಾರರ ಚೀಟ್ ಫಂಡ್ ನಲ್ಲಿ 1 ಚೀಟಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ಚೀಟಿ 5 ಲಕ್ಷ ಮೌಲ್ಯದಾಗಿರುತ್ತದೆ. ನಾನು ಚೀಟಿ ಹಣವನ್ನು ಸ್ವೀಕರಿಸುವಾಗ ದೂರುದಾರರು ಸಹಿ ಮಾಡಿದ ಮೂರು ಖಾಲಿ ಚೆಕ್ಕುಗಳನ್ನು ನನ್ನಿಂದ ಬಲವಂತವಾಗಿ ಪಡೆದುಕೊಂಡಿರುತ್ತಾರೆ. ಸದರಿ ಚೆಕ್ಕುಗಳ ಕೊನೆಯ ಮೂರು ಸಂಖ್ಯೆಗಳು 971, 972 ಮತ್ತು 973 ಆಗಿರುತ್ತವೆ. ದೂರುದಾರರ ಕಚೇರಿಯಲ್ಲಿ ಕೆಲಸ ಮಾಡುತ್ತಿರುವ ರಜನಿ ಎಂಬುವವರು ಸದರಿ ಚೆಕ್ಕುಗಳನ್ನು ಪಡೆದುಕೊಂಡ ಬಗ್ಗೆ ಹಿಂಬರಹವನ್ನು ನೀಡಿರುತ್ತಾರೆ. ಸಾಕ್ಷಿಯು ಸದರಿ ಹಿಂಬರಹದ ಪ್ರತಿಯನ್ನು ಹಾಜರುಪಡಿಸಿದ್ದು, ನಿಡಿ-01 ಎಂದು ಗುರುತಿಸಲಾಯಿತು. ನಾನು ಪಡೆದುಕೊಂಡಿರುವ ಚೀಟಿ ಹಣ ಮೊತ್ತವನ್ನು 40 ಕಂತುಗಳ ರೂಪದಲ್ಲಿ ಪೂರ್ಣ ಪಾವತಿ ಮಾಡಿರುತ್ತೇನೆ. ಆದರೆ ನಾನು ನೀಡಿರುವ ಚೀಟಿಗಳನ್ನು ವಾಪಸ್ಸು ನೀಡಿರುವುದಿಲ್ಲ.

ಸಿಸಿ.**ನಂ. 2/2025**

2) ನಾನು ನನ್ನ ಪತ್ನಿಯು ಪಡೆದುಕೊಂಡಿರುವ ಚೀಟಿ ಹಣಕ್ಕೆ ನಾನು ಜಾಮೀನುದಾರನಾಗಿರುವುದಿಲ್ಲ. ನಾನು ನೀಡಿರುವ ಖಾಲಿ ಚೆಕ್ಕಗಳನ್ನು ದುರುಪಯೋಗ ಪಡೆಸಿಕೊಂಡು ಈ ಪ್ರಕರಣ ದಾಖಲು ಮಾಡಿರುತ್ತಾರೆ. ದೂರುದಾರರು ನೀಡಿರುವ ತಿಳುವಳಿಕೆ ಪತ್ರಕ್ಕೆ ನಾನು ಪ್ರತ್ಯುತ್ತರ ನೀಡಿರುತ್ತೇನೆ. ಸದರಿ ಪ್ರತಿಯನ್ನು ಸಾಕ್ಷಿಯು ಹಾಜರುಪಡಿಸಿದ್ದು, ಸದರಿ ದಾಖಲೆಯನ್ನು ನಿಡಿ-02 ಎಂದು ಗುರುತಿಸಲಾಯಿತು. ದಿಃ 20/05/2025 ರಂದು ದೂರುದಾರರ ಪರ ವಕೀಲರು ನೀಡಿರುವ ತಿಳುವಳಿಕೆ ಪತ್ರವನ್ನು ನಿಡಿ-03 ಎಂದು ಗುರುತಿಸಲಾಯಿತು, ದಿಃ 05/05/2025 ರಂದು ದೂರುದಾರರಿಗೆ ನೀಡಿರುವ ತಿಳುವಳಿಕೆ ಪತ್ರದ ಪ್ರತಿಯನ್ನು ನಿಡಿ-04 ಎಂದು ಗುರುತಿಸಲಾಯಿತು, ಕೆ.ಆರ್.ನಗರ ಪೋಲಿಸ್ ಠಾಣಾಧಿಕಾರಿಯವರು ನೀಡಿರುವ ಹಿಂಬರಹವನ್ನು ನಿಡಿ-05 ಎಂದು ಗುರುತಿಸಲಾಯಿತು, ದೂರುದಾರರು ನೀಡಿರುವ ಹಿಂಬರಹವನ್ನು ನಿಡಿ-06 ಎಂದು ಗುರುತಿಸಲಾಯಿತು, ಮೂರು ಅಂಚೆ ರಶೀದಿಗಳನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಯನ್ನು ನಿಡಿ 7 ರಿಂದ 9 ಎಂದು ಗುರುತಿಸಲಾಯಿತು. ನಾಲ್ಕು ಅಂಚೆ ಸ್ವೀಕೃತಿಗಳನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಯನ್ನು ನಿಡಿ 10 ರಿಂದ 13 ಎಂದು ಗುರುತಿಸಲಾಯಿತು. ಆದ್ದರಿಂದ ನನ್ನನ್ನು ಈ ಪ್ರಕರಣದಿಂದ ಬಿಡುಗಡೆ ಮಾಡಬೇಕೆಂದು ಕೋರುತ್ತೇನೆ.

**ಪಾಟೀ ಸವಾಲುಃ** ದೂರುದಾರರ ಪರ ವಕೀಲರು ಪಾಟೀ ಸವಾಲು ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರಧನ್ಯಾದಂ., ಕೆ.ಆರ್.ನಗರ.